ಅನುದಾನದ ವತಿಯಿಂದ ಕಾಮಗಾರಿ ಅನುಷ್ಠಾನಗೊಳಿಸಬೇಕಾಗುತ್ತದೆ. ಒಂದು ವೇಳೆ ಯೋಜನೆ ಪೂರ್ಣಗೊಳಿಸುವ ಹಂತದಲ್ಲಿ ಅನುದಾನದ ಕೊರತೆಯಾದಲ್ಲಿ ಜಿಲ್ಲಾ ಪಂಚಾಯಿತಿಗೆ ವಿಶೇಷ ಅನುದಾನ ಬಿಡುಗಡೆ ಮಾಡಲು ಪರಿಶೀಲಿಸಲಾಗುವುದು.

ಶ್ರೀ ಬಿ.ಕೆ. ಸಂಗಮೇಶ್ವರ: ಮಾನ್ಯ ಅಧ್ಯಕ್ಷರೆ, ಈವತ್ತು ನಮ್ಮ ಭದ್ರಾವತಿ ಕ್ಷೇತ್ರದ ಕೆಲವು ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಇದೆ.

(ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಗೆ ಆಗಮಿಸಿ ಧರಣಿನಿರತರಾದರು)

ಜೊತೆಗೆ ನನ್ನ ಕ್ಷೇತ್ರದಲ್ಲಿಯೇ Dam ಇಟ್ಟುಕೊಂಡು ಗ್ರಾಮಾಂತರ ಪ್ರದೇಶದಲ್ಲಿ ಸಮರ್ಪಕವಾಗಿ ನಾವು ನೀರು ಪೂರೈಕೆ ಮಾಡುತ್ತಿಲ್ಲ. ಹಾಗಾಗಿ, ಇದೊಂದು ಯೋಜನೆಯನ್ನು ತಯಾರು ಮಾಡಿದ್ದೆವು. ಅದಕ್ಕೆ ಆಡಳಿತ ಮಂಜೂರಾತಿ ದೊರಕಿ ಏಳು ತಿಂಗಳಾಗಿದೆ. ಇಲ್ಲಿಯವರೆಗೆ ಯಾವುದೇ ರೂಪದ ಕಾರ್ಯವಾಗಿಲ್ಲ. ದಯಮಾಡಿ ಮಾನ್ಯ ಸಚಿವರು ತಕ್ಷಣ ಇದರ ಬಗ್ಗೆ ಗಮನಹರಿಸಿ ನಮ್ಮ ಕ್ಷೇತ್ರದಲ್ಲಿರುವ ಗ್ರಾಮಾಂತರ ಪ್ರದೇಶಗಳ ನೀರಿನ ಸಮಸ್ಯೆಯನ್ನು ಬಗೆಹರಿಸಿಕೊಡಬೇಕೆಂದು ತಮ್ಮ ಮುಖಾಂತರ ನಾನು ಮಾನ್ಯ ಸಚಿವರಿಗೆ ಮನವಿ ಮಾಡಿಕೊಳ್ಳುತ್ತೇನೆ. ಏಕೆಂದರೆ, ನಾವು ಇವತ್ತು ಒಂದು ಸಾವಿರ....

2. **ಕಾಂಗ್ರೆಸ್ ಪಕ್ಷದ ಶಾಸಕರಿಂದ ಸಿಬಿಐ ಎನ್‌ಕ್ವೈರಿ ಒತ್ತಾಯಿಸಿ ಧರಣಿ.**

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಧರಣಿ ಮುಂದುವರೆದಿದೆ. ಧರಣಿ ಏತಕ್ಕೆ? ಏನು ಸಮಾಚಾರ? ವಿಚಾರ ಏನು? ದಯವಿಟ್ಟು ಇದನ್ನೆಲ್ಲಾ ಕೇಳಬೇಕಲ್ಲವೇ? ಧರಣಿ, ಒಂದು ಕಡೆ, ಇನ್ನೊಂದು ಕಡೆ ಪ್ರಶ್ನೋತ್ತರ ಆಗುತ್ತಿದ್ದರೆ ಪರಿಸ್ಥಿತಿ ಏನು? ನಾವು ಸುಮ್ಮನೆ ಕುಳಿತಿರುವುದು, ತಾವು ಸುಮ್ಮನೆ ಕುಳಿತಿರುವುದು ಸರಿಯಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಅವರ ಪಾಡಿಗೆ ಅವರು ನಿಂತುಕೊಂಡಿರುವುದು, ಇವರು question ಕೇಳುತ್ತಿರುವುದು, ನಮಗೆ ನೀವು ಕಾಣುವುದಿಲ್ಲ, ನಿಮಗೆ ನಾವು ಕಾಣುವುದಿಲ್ಲ, ನಾವು ಹೇಗೆ ಸರ್ ಕೆಲಸ ಮಾಡುವುದು?

ಶ್ರೀ ವಾಟಾಳ್ ನಾಗರಾಜ್: ಕಾಂಗ್ರೆಸ್ ಪಕ್ಷದ ಶಾಸಕರು ಧರಣಿ ಮುಂದುವರೆಸುತ್ತಿದ್ದಾರೆ. ಈ ಬಗ್ಗೆ ಒಂದು ತೀರ್ಮಾನಕ್ಕೆ ತಾವು ಬರಬೇಕು. CBIಗೆ ಒಪ್ಪಿಸಬೇಕೆಂದು ಅವರು ಧರಣಿ ಮಾಡಿದ್ದಾರೆ. ನಿನ್ನೆ CBIಗೆ ಒಪ್ಪಿಸಬೇಕೆಂದು ಮತ್ತು ಮಸೂದೆ ತರಬೇಕೆಂದು ನಾವು ಸಭಾತ್ಯಾಗ ಮಾಡಿದ್ದೇವೆ. ಈ ಮಧ್ಯೆ ಇದು ಇತ್ಯರ್ಥವಾಗದಿರುವುದರಿಂದ ಧರಣಿ ನಡೆಸಲು ಸದನದ ಬಾವಿಗೆ ಬಂದಿದ್ದಾರೆ. ಈಗ ತಾವು ಸದನ ಮುಂದೂಡಿ ಮಾತುಕತೆ ನಡೆಸಿ ಅಥವಾ ಈಗಲೇ ತೀರ್ಮಾನ

ತೆಗೆದುಕೊಳ್ಳುವುದಾದರೆ ತೆಗೆದುಕೊಳ್ಳಬಹುದು. ತಮಗಿರತಕ್ಕಂಥ ಯಾವುದಾದರೊಂದು ವಿವೇಚನೆ ಉಪಯೋಗಿಸಿ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಕನಿಷ್ಠ ತಾವು ಅವರನ್ನು ಕೇಳಿ ಸಾರ್. Question Hour ಆಗಲಿ, C.M. ಬರಲಿ, ಆಮೇಲೆ ಇದನ್ನು ಇತ್ಯರ್ಥ ಮಾಡೋಣವೆಂದು ಹೇಳಿ. ಅವರು seat ಗೆ ಆದರೂ ಬರುವುದಕ್ಕೆ ಹೇಳಿ ಸಾರ್.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಈ ದಿವಸ ಸದನದ ಬಾವಿಯಲ್ಲಿ ಧರಣಿ ಮಾಡುತ್ತಿರುವ ಎಲ್ಲರೂ ಕೂಡ ಹಿರಿಯ ಸದಸ್ಯರು. ಅವರು ಅನೇಕ ಒತ್ತಾಯಗಳನ್ನು ಮಾಡಲಿಕ್ಕೆ ಅವರಿಗೆ ಸಾರ್ವಭೌಮ ಅಧಿಕಾರ, ಸ್ವಾತಂತ್ರ್ಯನೂ ಕೂಡ ಇದೆ. ಅವರು CBI enquiry ಮಾಡಬೇಕೆಂದು ಹೇಳಿದರು. ಮತ್ತೆ ಮಸೂದೆಯನ್ನು ಮಂಡಿಸಬೇಕು ಹಾಗೂ CBI enquiry ಆಗಬೇಕೆಂದು ಅನೇಕ ಹಿರಿಯ ಸದಸ್ಯರು, ಬೇರೆ ಪಕ್ಷದವರು ಹೇಳಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಇಲ್ಲ, ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಹಾಗಾದರೆ ಅವರು ಮಸೂದೆ ಬೇಕೆಂದು ಹೇಳಿಲ್ಲ. ಆ ಕಾರಣ ಇದ್ದಾಗ, ನಾವು ನಮ್ಮದೇ ಆಗಿರುವ ನಿಲುವನ್ನು ಪ್ರಕಟಣೆ ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ನಿಮಗೆಲ್ಲಾ ಗೊತ್ತಿರುವಂಥದ್ದು "Opposition has a say and the Treasury Bench has its way" ಎಂದು ಹೇಳಿ. ಆದ್ದರಿಂದ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ನಮ್ಮ ನಿರ್ಧಾರವನ್ನು ಪ್ರಕಟಿಸಿದ್ದೇವೆ. ಆ ನಿರ್ಧಾರದ ಹಿನ್ನೆಲೆಯಲ್ಲಿ ಸರ್ಕಾರ ಮತ್ತು ಸದನ ಸುಲಲಿತವಾಗಿ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಬೇಕಾಗುತ್ತದೆ. ಆ ಕಾರಣಕ್ಕಾಗಿಯೇ ನಾನು ಬಹಳ ನಮ್ರವಾಗಿ ಎಲ್ಲಾ ಹಿರಿಯರಿಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ದಯವಿಟ್ಟು ಧರಣಿಯನ್ನು ಮಾಡದೆ, ಪ್ರಶ್ನೋತ್ತರ ವೇಳೆ ಆಗಲಿ, ಅದಾದನಂತರ ಮತ್ತೆ ಈ ವಿಚಾರವನ್ನು ಕುರಿತು ಚರ್ಚೆ ಮಾಡಲಿಕ್ಕೆ ಸಾಧ್ಯತೆ ಇದ್ದರೆ ಪರಿಶೀಲಿಸಬಹುದು. ಮತ್ತೆ, ಪುನರ್‌ವಿಮರ್ಶೆ ಪ್ರಶ್ನೆಯೇ ಇಲ್ಲ. ಮುಖ್ಯಮಂತ್ರಿಗಳೂ ಕೂಡ ಬಂದಿದ್ದಾರೆ. ಅವರು ವಿಚಾರವನ್ನು ತಿಳಿಸಿರುತ್ತಾರೆ. ಎಲ್ಲಿಯೂ ಕೂಡ ಸರ್ಕಾರ ಹೀಗೆಯೇ ನಡೆಯಬೇಕೆಂದು ಒತ್ತಾಯ ಮಾಡಿರುವುದು ಇಲ್ಲ. ಅವರೂ ಕೂಡ ಕೇಂದ್ರದಲ್ಲಿ ಸರ್ಕಾರ ನಡೆಸುತ್ತಿದ್ದಾರೆ. 14 ರಾಜ್ಯಗಳಲ್ಲಿ ಅವರು ಆಡಳಿತ ನಡೆಸುತ್ತಿದ್ದಾರೆ. ಪ್ರತಿ ರಾಜ್ಯಗಳಲ್ಲಿಯೂ ಕೂಡ ವಿರೋಧ ಪಕ್ಷದವರು ಸರ್ಕಾರದ ನಿರ್ಧಾರ ಹೀಗೆಯೇ ಆಗಬೇಕೆಂದು ಒತ್ತಾಯ ಮಾಡಲಿಕ್ಕಾಗುವುದಿಲ್ಲ. ಹಾಗಿದ್ದಾಗ ಮುಂದಿನ ಕ್ರಮವೇನು? ಅವರು ಜನಾಭಿಪ್ರಾಯವನ್ನು ರೂಪಿಸಬಹುದು. ಅವರು ಬೇರೆ ಬೇರೆ ವೇದಿಕೆಗಳಲ್ಲಿ ನಮ್ಮನ್ನು ಖಂಡಿಸಬಹುದು. ಇದೆಲ್ಲಾ ತರಹದ

ಸ್ವಾತಂತ್ರ್ಯವೂ ಕೂಡ ಅವರಿಗಿದೆ. ಇದರ ಜೊತೆಗೆ ಕೂಡ ನಾವು ಅವರಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ. ಇಲ್ಲಿ ಸರ್ಕಾರ ಅವರಲ್ಲಿ ವಿನಂತಿ ಮಾಡಿಕೊಳ್ಳಬಹುದು. ಎಲ್ಲಾ ನಿಷ್ಪಕ್ಷಪಾತವಾದ ತನಿಖೆಯನ್ನು ಮಾಡಲಿಕ್ಕೆ ನಾವೆಲ್ಲರೂ ತಯಾರಿದ್ದೇವೆನ್ನುವಂಥ ಮಾತನ್ನು ಹೇಳಿದ್ದೇವೆ. ಇಡೀ ಸದನದ ಕಾರ್ಯಕಲಾಪಗಳಲ್ಲಿ ನಡೆದಿರತಕ್ಕಂಥ ವಿಷಯಗಳೆಲ್ಲವನ್ನೂ ಕೂಡ ನಾವು ತಿಳಿಸಿದ್ದೇವೆ. ಮಾನ್ಯ ವಾಟಾಳ್ ನಾಗರಾಜ್‌ರವರು, ಶ್ರೀರಾಮರೆಡ್ಡಿಯವರು ಹಾಗೂ ಮಾಧುಸ್ವಾಮಿಯವರು ಹೇಳಿದಂತೆ, ಬೇಕಾದರೆ ಪ್ರಶ್ನೋತ್ತರ ವೇಳೆ ಆದಮೇಲೆ ಅವರನ್ನು ನಾವು ಕರೆದು ಮಾತನಾಡಬಹುದು. ಅಷ್ಟೊತ್ತಿಗೆ ಏನಾದರೂ ಮುಖ್ಯಮಂತ್ರಿಗಳನ್ನೂ ಕೂಡ ಕರೆಸುತ್ತೇನೆ. ಉಪ ಮುಖ್ಯಮಂತ್ರಿಗಳನ್ನೂ ಕೂಡ ಕರೆಸಿ ನಾವು ಮಾತನಾಡಿ, ಇನ್ನೇನಾದರೂ ಕೂಡ ಸಮಸ್ಯೆಗಳನ್ನು ಇಂಥ ಅನೇಕ ಸಂದರ್ಭಗಳಲ್ಲಿ ಬಗೆಹರಿಸಿಕೊಂಡಿರತಕ್ಕಂಥ ಅನುಭವದ ಹಿನ್ನೆಲೆಯಲ್ಲಿ ಮತ್ತೊಮ್ಮೆ ಅವರನ್ನು ಒತ್ತಾಯ ಮಾಡುತ್ತೇನೆ. ಅದರ ಜೊತೆಗೆ ನಾನೇನೂ ತಾಂತ್ರಿಕ ಕಾರಣಗಳಿಗಾಗಿ ಜೋತುಬೀಳುವ ಪ್ರಯತ್ನ ಮಾಡುವುದಿಲ್ಲ. ಅವರು ಬಾವಿಯಲ್ಲಿ ಇದ್ದಂಥ ಸಂದರ್ಭದಲ್ಲಿಯೂ ಕೂಡ ಇತ್ತೀಚಿನ ದಿನಮಾನಗಳಲ್ಲಿ ಇಂಥವು ಹೆಚ್ಚು ಆಗತಕ್ಕಂಥ ಕಾರಣ ಇರುವುದರಿಂದ ನಮ್ಮ ruling ಕೂಡ ಇದೆ. The House is also in order ಎನ್ನುವ ಮಾತೂ ಕೂಡ ತಾವು ಈ ಪೀಠದ ಮೂಲಕ ತಮ್ಮ ಹಿಂದಿದ್ದಂಥ ಅನೇಕ Speaker ಗಳು ಕೊಟ್ಟಿರುವ ಉದಾಹರಣೆ ಇದೆ. ಅದು ಮಾನ್ಯ ರಮೇಶ್‌ಕುಮಾರ್‌ರವರಿಗೆ ಕೂಡ ಗೊತ್ತಿರುವ ವಿಷಯ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಸಹ ಗೊತ್ತಿರುವ ವಿಷಯ.

(ಅಡಚಣೆ)

ಅದನ್ನೇ ನಾನು ಹೇಳಿದ್ದು, ತಾಂತ್ರಿಕ ಕಾರಣಗಳಿಗಾಗಿ ಜೋತುಬೀಳುವ ಕೆಲಸವನ್ನು ನಾನು ಮಾಡುವುದಿಲ್ಲ. ಸರ್ಕಾರ ನಡೆಸಲಿಕ್ಕೆ ಅವರ ಸಹಕಾರ ಸಂಪೂರ್ಣ ಬೇಕಾಗಿದೆ. ಅಂತಿಮವಾಗಿ ಅವರ ಗುರಿ ಮತ್ತು ನಮ್ಮ ಗುರಿ ಕೂಡ ರಾಜ್ಯದ ಹಿತಾಸಕ್ತಿ ಆಗಿರುವ ಕಾರಣಕ್ಕಾಗಿಯೇ ಮತ್ತೊಮ್ಮೆ ಪ್ರಶ್ನೋತ್ತರ ವೇಳೆ ಆದಮೇಲೆ ತಾವು ಬೇಕಾದರೆ ತಮ್ಮ chamber ನಲ್ಲಿ ಮಾತನಾಡಲಿಕ್ಕೆ ಅವರನ್ನು ಕರೆಯಬಹುದು. ಅಷ್ಟೊತ್ತಿಗೆ ಮುಖ್ಯಮಂತ್ರಿಗಳು ಬರುತ್ತಾರೆನ್ನುವ ಕಾರಣಕ್ಕಾಗಿ. ಪ್ರಶ್ನೋತ್ತರ ವೇಳೆಗೆ ಎಲ್ಲಾ ಕಾಲದಲ್ಲಿಯೂ ಕೂಡ ದೊಡ್ಡ ಪ್ರಾಶಸ್ತ್ಯ ಇದೆ. ಇವತ್ತು ಪ್ರಾಯಶಃ ಅವರೆಲ್ಲರೂ ಪ್ರಶ್ನೆ ಕೇಳದೆ ಹೋಗಬಹುದು. ಹಾಗಾಗಿ, ಬೇಗನೆ ಮುಕ್ತಾಯವಾಗುತ್ತದೆ. ಅದು ಆದ ತಕ್ಷಣವೇ ತಾವು ನಿಮ್ಮ chamber ನಲ್ಲಿ ಕರೆದು ಮಾತನಾಡಿರಿ. ಅದಕ್ಕಾಗಿ ತಾವೆಲ್ಲಾ ತಮ್ಮ ಆಸನಗಳಿಗೆ ಹೋಗಬೇಕೆಂದು ಮತ್ತೊಂದು ಸಲ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಈಗಲೇ ಸಭೆಯನ್ನು ಮುಂದಕ್ಕೆ ಹಾಕಿ. ಆಮೇಲೆ ಮಾತುಕತೆ ಆಗಲಿ. ಪ್ರಶ್ನೋತ್ತರ ಅದು ಆಗಲಿಕ್ಕೆ

ಸಾಧ್ಯವಿಲ್ಲ. ಸಭೆಯನ್ನು ತಾವು ಮುಂದಕ್ಕೆ ಹಾಕಿ. ಮತ್ತೆ ಏನು ಸಮಸ್ಯೆ ಇದೆಯೆಂದು ಅವರ ಸಮಸ್ಯೆಯನ್ನು ಕೇಳಿ. ನಮ್ಮ ಸಮಸ್ಯೆನೂ ಸಹ ಇದೆ. ಮಸೂದೆ ತರದೆ ಅಲ್ಲಿರುವ ಯಾವುದೇ ರೈತರಿಗೆ ಒಂದು ಅಂಗುಲ ನೆಲವನ್ನೂ ಸಹ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಮಸೂದೆ ಆಗಲೇಬೇಕು. CBI enquiry ಅದು ಸ್ಪಷ್ಟ ನಮ್ಮ ನಿಲುವು. ಆದ್ದರಿಂದ ನಮ್ಮ ಸಮಸ್ಯೆಯನ್ನೂ ಸಹ ಕೇಳಬೇಕು ಮತ್ತು ಅಲ್ಲಿ ಧರಣಿ ಮಾಡುತ್ತಿರುವ ನಮ್ಮ ಸ್ನೇಹಿತರನ್ನೂ ಒಟ್ಟಿಗೆ ಕೇಳಬೇಕಾದದ್ದು ನಿಮ್ಮ ಕರ್ತವ್ಯ. ಈಗಂತೂ ಈ ಸದನವನ್ನು ನಡೆಸುವ ವಿಚಾರದಲ್ಲಿ ತಾವು ಮುಂದಕ್ಕೆ ಹಾಕಿ, ಕರೆದು ಕುಳಿತು ಮಾತನಾಡುವುದು ಸೂಕ್ತವೆಂದು ನಮ್ಮೆಲ್ಲರ ಒಟ್ಟಾರೆ ಅಭಿಪ್ರಾಯ.

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ): (ಧರಣಿಯಿಂದ ತಮ್ಮ ಆಸನಕ್ಕೆ ಹೋದ ಬಳಿಕ): ಮಾನ್ಯ ಅಧ್ಯಕ್ಷರೆ, ತಾತ್ವಿಕವಾಗಿ ಮಾನ್ಯ ಸಂಸದೀಯ ಸಚಿವರು ಹೇಳಿದ ಮಾತನ್ನು ನಾನು ಸಮರ್ಥಿಸುತ್ತೇನೆ. House is in order ಎಂದು rulings ಕೊಟ್ಟಿರತಕ್ಕಂಥದ್ದು ಅದಕ್ಕೂ ಕೂಡ ನಾನು ಒಪ್ಪಿಗೆ ಕೊಡುತ್ತೇನೆ. ಆದರೆ ನಿಮ್ಮಲ್ಲಿ ನಾನು ಇಷ್ಟೇ ಕೇಳಿಕೊಳ್ಳುತ್ತೇನೆ. ಸ್ವಲ್ಪ ಹಳೆಯದನ್ನು ನೆನಪು ಮಾಡಿಕೊಳ್ಳಿ. (ಅಧ್ಯಕ್ಷರನ್ನುದ್ದೇಶಿಸಿ) ತಾವು ಇರತಕ್ಕಂಥ ಜಾಗದಲ್ಲಿ ನಾನು ಕುಳಿತಿದ್ದೆ. ಮಾನ್ಯ ಎಂ.ಪಿ. ಪ್ರಕಾಶ್‌ರವರು ಮುಂದಿನ bench ನಲ್ಲಿ treasury bench ನಲ್ಲಿ ಕುಳಿತಿದ್ದರು. ಅಂದಿನ ಕೆರೆಗೋಡಿನ ಶಾಸಕರಾದಂಥ ಶ್ರೀ ಜಿ.ಬಿ. ಶಿವಕುಮಾರ್‌ರವರು ಶೂನ್ಯವೇಳೆಯಲ್ಲಿ ಅಂದಿನ ಸರ್ಕಾರಕ್ಕೆ ಒಂದು ಒತ್ತಡ ತಂದರು. ಹಿಂದೆ Estimates Committeeಯ Chairman ಆಗಿದ್ದಂಥ ಹಾಸನದ ಶಾಸಕರಾಗಿದ್ದಂಥ ಶ್ರೀ ಕೆ.ಹೆಚ್. ಹನುಮೇಗೌಡರು ಆರೋಗ್ಯ ಇಲಾಖೆಯ ವಿಚಾರದಲ್ಲಿ ಕೊಟ್ಟಂಥ ಅಭಿಪ್ರಾಯವೇನಿತ್ತು, ವರದಿ ಏನಿತ್ತು, ಅದರಲ್ಲಿ ಶ್ರೀಮಾನ್ ಜಿ. ಪುಟ್ಟಸ್ವಾಮಿಗೌಡರು ಆರೋಗ್ಯ ಮಂತ್ರಿಗಳಾಗಿ ಮಾಡಿದಂಥ ಕೆಲಸವನ್ನು ವಿಮರ್ಶಿಸಲಾಗಿತ್ತು. ಆ ವರದಿಯನ್ನಾಧರಿಸಿ CBI enquiry ಮಾಡಬೇಕೆಂದು ಇಡೀ House ಗದ್ದಲದಲ್ಲಿತ್ತು. ಶೂನ್ಯವೇಳೆಯಾಗಿತ್ತು. ನಾನು ಶೂನ್ಯವೇಳೆಯಲ್ಲಿ ಏನಪ್ಪಾ ಶಿವಕುಮಾರ್‌ರವರೇ, ನೀವೇನು ಪ್ರಸ್ತಾಪ ಮಾಡಬೇಕೆಂದು ಕೇಳಿದೆ. ಅಷ್ಟೇ ನನ್ನ ಕರ್ತವ್ಯ. ಒಂದು ಕ್ಷಣದಲ್ಲಿ ಅಲ್ಲಿ ಶಿವಕುಮಾರ್‌ರವರು ಎದ್ದುನಿಂತು ಈ ತರಹ ಹನುಮೇಗೌಡರು ಕೊಟ್ಟಿರುವ ವರದಿಯನ್ನು CBI ಗೆ ಒಪ್ಪಿಸಬೇಕು, enquiry ಆಗಬೇಕೆಂದು ಹೇಳುತ್ತಾರೆ. ತಾವು (ಎಂ.ಪಿ. ಪ್ರಕಾಶ್) ಮತ್ತು ನಾಣಯ್ಯನವರು ಅಲ್ಲಿ ಕುಳಿತಿದ್ದಿರಿ. ಒಂದು second ಕೂಡ ಇಲ್ಲ. ತಕ್ಷಣ ಒಪ್ಪಿಸಿದ್ದೇವೆಂದು ಹೇಳಿಬಿಟ್ಟರು. ಅಷ್ಟು ಲಘುವಾಗಿ ಒಂದು Estimates Committeeಯ report ಅನ್ನು CBIಗೆ ಒಪ್ಪಿಸುವುದಕ್ಕೆ ಶೂನ್ಯವೇಳೆಯಲ್ಲಿ ಒಪ್ಪಿಕೊಳ್ಳುವ ಧಾರಾಳತನ ತೋರಿಸಿದಂಥ ತಾವು, ಒಂದು ವಾರದ ಕಾಲ ಸುದೀರ್ಘವಾಗಿ

ಕಳ್ಳತನವಾಗಿದೆಯೆನ್ನುವ ರೀತಿಯಲ್ಲಿ ಚರ್ಚೆ ಮಾಡಿ, ಇಡೀ ದೇಶದ ಖಜಾನೆ ಲೂಟಿಯಾಗಿದೆ, ಇದಕ್ಕಿಮತ ಹಗಲು ದರೋಡೆನೇ ಇಲ್ಲ ಎನ್ನುವ ರೀತಿಯಲ್ಲಿ ವ್ಯಾಖ್ಯಾನಿಸಿ, ಎಲ್ಲೋ ಒಂದು ಕಡೆಗೆ ನಾವೇ ಪರೋಕ್ಷವಾಗಿ ಇದಕ್ಕೆ ಕಾರಣರೆನ್ನುವ ಅಭಿಪ್ರಾಯವನ್ನೂ ಕೂಡ ಕೊಟ್ಟು, ಈಗ CBI ತನಿಖೆ ಮಾಡಿಸಿ ಎಂದು ಹೇಳಿದರೆ, ನಿಯಮ 69ರೊಳಗಿದೆ, 68ರೊಳಗಿದೆ, ನೀವು ಹೇಳಿದ ಹಾಗೆ ಆಗಬೇಕೇ? ಇವತ್ತು Treasury Bench has its way..

ಶ್ರೀ ವಾಟಾಳ್ ನಾಗರಾಜ್: ಆವತ್ತು ಅದು CBI ಗೆ ಹೋಗುವುದು ಗೊತ್ತಾಗಲೇ ಇಲ್ಲ. ತಕ್ಷಣ ಹೊರಟುಹೋಯಿತು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಗೊತ್ತಾಗಲಿಲ್ಲ. ಆದ್ದರಿಂದ ನಾನು ಕೇಳುತ್ತೇನೆ, ಸನ್ನಿವೇಶದಲ್ಲಿ ಆವತ್ತಿಗೂ ಇವತ್ತಿಗೂ ಏನು ವ್ಯತ್ಯಾಸ? ಇಲ್ಲಿ 8 ದಿವಸ ಚರ್ಚೆ ಮಾಡಿದ್ದಾದ ಮೇಲೆ ಬಂದಂಥ ಅಭಿಪ್ರಾಯವಿದು. That was a reference just made during the Zero Hour by one of the Members. It was immediately conceded to by the then Government of which you were a Member. What is the difference?

ಶ್ರೀ ವಾಟಾಳ್ ನಾಗರಾಜ್: ನ್ಯಾಯಾಂಗ ತನಿಖೆಗೆ ಒಪ್ಪಿಗೆ ಇದೆಯೆಂದು ಹೇಳುವವರು CBIಗೆ ಒಪ್ಪಿಸುವುದಕ್ಕೆ ಏಕೆ ಹಿಂದೇಟು ಹಾಕುತ್ತಿದ್ದೀರಿ? CBIಗೆ ಒಪ್ಪಿಸಬೇಕು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಇದಕ್ಕೆ ಏನು ತಾತ್ವಿಕವಾದ ನಿಲುವು ತಾಳಬೇಕು? ತಾವು ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಎಸ್. ರಮೇಶ್‌ರವರು ತೀರಿಹೋಗಿದ್ದಾರೆ. ಅದೊಂದು ಕರ್ತವ್ಯಲೋಪವಾಗಿದೆ. ಅವರಿಗೆ ಒಂದು ಸಂತಾಪ ಸೂಚನೆ ಇಲ್ಲಿ ನಡೆಯಬೇಕಾಗಿತ್ತು. ಅದನ್ನೂ ನಾವು ಮಾಡಿಲ್ಲ.

ಅಧ್ಯಕ್ಷರು: ಏಕೆಂದರೆ, ನಮಗೆ ಮೊದಲು ಗೊತ್ತಾಗಿಲ್ಲ. ನಮಗೆ ಆ information ಇರಲಿಲ್ಲ. ನಮ್ಮವರು ಈಗತಾನೆ ಬಂದು ಹೇಳಿದರು.

ಶ್ರೀ ವಾಟಾಳ್ ನಾಗರಾಜ್: ಮಾಜಿ ಸಚಿವರಾದಂಥ ಎಸ್. ರಮೇಶ್‌ರವರು ತೀರಿಕೊಂಡಿದ್ದಾರೆ. ಅದರ ಸುದ್ದಿ ನಮ್ಮ ಕಾರ್ಯಾಲಯಕ್ಕೆ ಮುಟ್ಟಿದೆಯೋ ಇಲ್ಲವೋ ಗೊತ್ತಿಲ್ಲ. ಅದಕ್ಕೆ ತಾವು ಯಾವ ರೀತಿ ತೀರ್ಮಾನ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳಿ.

ಅಧ್ಯಕ್ಷರು: ಸಂತಾಪ ಸೂಚನೆ ಸೋಮವಾರ ಮಾಡೋಣ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಕ್ವೊಶ್ಚನ್ ಹವರ್ ಅಂತ ಹೇಳಿದ್ದಾರೆ. Question Hour ಅನ್ನು block ಮಾಡತಕ್ಕಂಥ ದುರುದ್ದೇಶ ನಮಗಿಲ್ಲ. We will discuss and come to a conclusion.

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್: ಸಭೆಯನ್ನು ಐದು ನಿಮಿಷ ಮುಂದಕ್ಕೆ ಹಾಕಿ ಸಾರ್.

ಅಧ್ಯಕ್ಷರು: ನಾನು ಹೇಳುವುದೇನೆಂದರೆ, Question Hour ಆರಂಭವಾಗಿ question ಕೇಳುತ್ತಿದ್ದರು. ಆ ಸಂದರ್ಭದಲ್ಲಿ ಇವರು ಧರಣಿಗೆ ಬಂದರು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ನಾನು ಏನಂತಿ ಮಾಡಿಕೊಳ್ಳುವುದೇಂದರೆ, ಈ ಸದನ ನಡೆಯಬೇಕಾದ ಸನ್ನಿವೇಶದಲ್ಲಿ ಹಿಂದಿನ ಘಟನಾವಳಿಗಳನ್ನು ನಾವು ಆಧರಿಡುತ್ತೇವೆ. 1978ನೇ ಇಸವಿಯಲ್ಲಿ ಮಾನ್ಯ ದೇವರಾಜು ಅರಸುರವರು ಮುಖ್ಯಮಂತ್ರಿಯಾಗಿ ಆರಿಸಿಬಂದರು.

(ಅಡಚಣೆ)

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಹಿರಿಯರೆಲ್ಲರೂ ಒತ್ತಾಯ ಮಾಡಿರುವುದರಿಂದ, ಸ್ವಲ್ಪ ಕಾಲ ಅವಕಾಶ ಕೊಡಲಿಕ್ಕಾಗಿ ತಾವು ಸದನವನ್ನು ಮುಂದಕ್ಕೆ ಹಾಕಿದರೆ ನಮ್ಮದು ಯಾವುದೂ ಆಕ್ಷೇಪ ಇಲ್ಲ.

ಮಾನ್ಯ ಸದಸ್ಯರೊಬ್ಬರು: ಕ್ವೊಶ್ಚನ್ ಹವರ್ ಮುಗಿದುಬಿಡಲಿ.

ಅಧ್ಯಕ್ಷರು: ಈಗ ಸದನವನ್ನು ಅರ್ಧ ಗಂಟೆ ಕಾಲ ಮುಂದೂಡಲಾಗಿದೆ.

(ಸದನವು ಬೆಳಗ್ಗೆ 10.36 ಗಂಟೆಗೆ ಮುಂದೂಡಲ್ಪಟ್ಟು ಅರ್ಧ ಗಂಟೆ ಬಳಿಕ ಸೇರಲು ನಿಃಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 1 ಗಂಟೆ 18 ನಿಮಿಷಕ್ಕೆ ಸಮಾವೇಶಗೊಂಡಿತು)

(ಉಪ ಸಭಾಧ್ಯಕ್ಷರು) ಶ್ರೀ ಎನ್.ವೈ. ಗೋಪಾಲಕೃಷ್ಣರವರು ಈ ಸಂದರ್ಭದಲ್ಲಿ ಅಧ್ಯಕ್ಷ ಪೀಠವನ್ನಲಂಕರಿಸಿದರು.

(ಈ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರೂ ಸೇರಿದಂತೆ ಕಾಂಗ್ರೆಸ್‌ನ ಸದಸ್ಯರು ಸದನದ ಬಾವಿಯಲ್ಲಿ ನಿಂತು ಸಿಬಿಐ ಎನ್‌ಕ್ವೈರಿ ಆಗಲೇ ಬೇಕೆಂದು ಘೋಷಣೆಗಳನ್ನು ಕೂಗುತ್ತಿದ್ದರು)

ಉಪ ಸಭಾಧ್ಯಕ್ಷರು: ಈಗ ಮಾನ್ಯ ಶ್ರೀ ಬಿ. ನಾಗರಾಜ ಶೆಟ್ಟಿರವರು, ಮೀನುಗಾರಿಕೆ ಸಚಿವರು, ತಮ್ಮೆಲ್ಲರನ್ನೂ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭೋಜನ ಕೂಟಕ್ಕೆ ಆಹ್ವಾನಿಸಿದ್ದಾರೆ. ದಯವಿಟ್ಟು ಎಲ್ಲರೂ ಭಾಗವಹಿಸಬೇಕು. ಮತ್ತೆ ಇದೇ ದಿವಸ ಮಧ್ಯಾಹ್ನ 2.00 ಗಂಟೆಗೆ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಶಾಸಕರು ಮತ್ತು ಪತ್ರಕರ್ತರ ನಡುವೆ ಕ್ರಿಕೆಟ್ ಸ್ಪರ್ಧೆ ಏರ್ಪಡಿಸಲಾಗಿದೆ, ಇದರಲ್ಲಿ ಸದಸ್ಯರು ಭಾಗವಹಿಸಬಹುದು. ಈಗ ಸದನವನ್ನು ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1 ಗಂಟೆ 20 ನಿಮಿಷಕ್ಕೆ ಮುಂದೂಡಲ್ಪಟ್ಟು, ದಿನಾಂಕ 10–7–06 ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

* * * * *